**ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 19-01-2019 ರಂದು ಬೆಳಗ್ಗೆ 11:30 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ಎನ್‌ಐಸಿ ಸಂಸ್ಥೆಯೊಂದಿಗೆ ನಡೆದ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀಮತಿ ಹೊನ್ನಾಂಬ, ಕಾರ್ಯದರ್ಶಿಗಳು.
3. ಶ್ರೀಮತಿ ಸಂಗೀತ ಮಂಜುನಾಥ, ತಾಂತ್ರಿಕ ನಿರ್ದೇಶಕರು, ಎನ್‌ಐಸಿ ಸಂಸ್ಥೆ.
4. ಶ್ರೀ ವಿಜಯ ಕೃಷ್ಣನ್, ಸಂಯೋಜಕರು, ಖಜಾನೆ-2.

**ಎನ್‌ಐಸಿ ಮತ್ತು ಖಜಾನೆ-2ರ ಸಹಭಾಗಿತ್ವದಲ್ಲಿ ಕರ್ನಾಟಕ ಮಾಹಿತಿ ಆಯೋಗದಲ್ಲಿ RTI Online ಅರ್ಜಿ ವಿಚಾರ ಕುರಿತು ಸಭೆ.**

ಕರ್ನಾಟಕ ಮಾಹಿತಿ ಆಯೋಗದಲ್ಲಿ ಎನ್‌ಐಸಿ ಮತ್ತು ಖಜಾನೆ-2ರ ಸಹಭಾಗಿತ್ವದಲ್ಲಿ RTI ಅರ್ಜಿಗಳನ್ನು Online ಮೂಲಕ ಸಲ್ಲಿಸುವ ಕುರಿತು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರೊಂದಿಗೆ ಸಭೆ ನಡೆಸಿದ್ದು, ಸಭೆಯಲ್ಲಿ ಆನ್‌ಲೈನ್ ಅರ್ಜಿಗೆ ಸಂಬಂಧಿಸಿದಂತೆ ಅರ್ಜಿದಾರನು ಮಾಹಿತಿ ಹಕ್ಕು ಅಧಿನಿಯಮ-2005ರ ಕಲಂ 6(1)ರಡಿ ಪಾವತಿಸಬೇಕಾದ ಪ್ರಾರಂಭಿಕ ಶುಲ್ಕ, ಪಾವತಿಸುವ ವಿಧಾನ ಹಾಗೂ ಸ್ವೀಕೃತಿಯ ಕುರಿತಂತೆ ಚರ್ಚಿಸಿದರು.

ಎನ್‌ಐಸಿ ಸಂಸ್ಥೆಯವರು ಸಿದ್ಧಪಡಿಸುವ ನೂತನ Online Portal ಅರ್ಜಿಯಲ್ಲಿ ಕೆಲವು ಅಂಶಗಳನ್ನು ಅಳವಡಿಸಿಕೊಳ್ಳಬೇಕಾಗಿದ್ದು, ಖಜಾನೆ-2ರ ಸಂಯೋಜಕರು 1) Challan Reference No. 2) Head of Account 3) The Total Amount 4) Date & other Mandatory Things 5) Purpose & Sub-Purpose ಈ ಪ್ರಮುಖ ಅಂಶಗಳನ್ನು ಎನ್‌ಐಸಿ ಸಂಸ್ಥೆಯವರು ಸಿದ್ಧಪಡಿಸುವ ನೂತನ Online Portal ಅರ್ಜಿಯಲ್ಲಿ ಅಳವಡಿಸುವಂತೆ ಸಭೆಯಲ್ಲಿ ತಿಳಿಸಿದರು.

ಎನ್‌ಐಸಿ ಸಂಸ್ಥೆಯವರು ಪ್ರಥಮವಾಗಿ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 6(1) ರಡಿ ಮಾಹಿತಿ ಕೋರಿ ಸಲ್ಲಿಸುವ ಅರ್ಜಿಗಳಿಗೆ ಆದ್ಯತೆ ನೀಡಲಾಗುವುದೆಂದು ಮಾನ್ಯ ಆಯುಕ್ತರಿಗೆ ತಿಳಿಸಿದರು. ಮುಂದುವರೆಯುತ್ತಾ, ಖಜಾನೆ-2ರ ಸಂಯೋಜಕರು ಸಾಧ್ಯವಾದಷ್ಟು ಶೀಘ್ರದಲ್ಲಿ Project ನ್ನು ಪೂರ್ಣಗೊಳಿಸುವುದಾಗಿ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರಿಗೆ ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

19/1/2019

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು